# ವಿಶೇಷ ಪತ್ರಿಕೆ

| ಭಾಗ – IV-A | ಬೆಂಗಳೂರು, ಶನಿವಾರ, ಅಕ್ಟೋಬರ್ ೨೪, ೨೦೦೯ (ಕಾರ್ತೀಕ ೨, ಶಕ ವರ್ಷ ೧೯೩೧) | ನಂ. ೯೨೫ |
|---|---|---|

**Karnataka Legislature Secretariat**

**NOTIFICATION**

**No. Acts-1/257/JAN/LC/2007, Bangalore, Dated: 14th October, 2009**

In exercise of the power conferred by rule 5A of the Karnataka Legislature (Members Medical Attendance) Rules, 1968 read with section 21 of the Karnataka General Clauses Act, 1899 (Karnataka Act III of 1899), the Karnataka Legislature hereby amends the notification No. Acts-1/ 26/MAR/98, dated: 1.4.1998 published in the Karnataka Gazette dated 8.1.2007 namely:-

"In the said notification under the heading Private Hospitals in Bangalore after entry at (iii) the following shall be inserted namely:-

**RETINA INSTITUTE OF KARNATAKA**
**No. 122, 5th Main Road, Chamarajpet,**
**BANGALORE – 560 018.**

BY ORDER OF THE SPECIAL BOARD,

**H.M. BHARATHESH**
Principal Secretary
KARNATAKA LEGISLATURE

# ವಿಶೇಷ ಪತ್ರಿಕೆ

| ಭಾಗ – IV-A | ಬೆಂಗಳೂರು, ಶನಿವಾರ, ಅಕ್ಟೋಬರ್ ೨೪, ೨೦೦೯ (ಕಾರ್ತೀಕ ೨, ಶಕ ವರ್ಷ ೧೯೩೧) | ನಂ. ೯೨೬ |
|---|---|---|

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಸಿಆಸುಇ 2 ಎಸ್‌ಎಂಆರ್ 2008, ಬೆಂಗಳೂರು, ದಿನಾಂಕ: 24ನೇ ಅಕ್ಟೋಬರ್, 2009**

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ 24.9.2009 ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 2 ಎಸ್‌ಎಂಆರ್ 2008 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ 25.9.2009 ರ ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ IV–ಎ, ಸಂಖ್ಯೆ: 90 ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ 14)ರ 3 ನೇ ಪ್ರಕರಣದ (2) ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ದಿನಾಂಕ 25.9.2009 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿನ ಮೇಲೆ ಯಾವುದೇ ಆಕ್ಷೇಪಣೆಗಳು/ಸಲಹೆಗಳು ರಾಜ್ಯ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಆದ್ದರಿಂದ, ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ 14) ರ 8 ನೇ ಪ್ರಕರಣದೊಂದಿಗೆ ಓದಿಕೊಂಡ 3 ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:–

ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) (ತಿದ್ದುಪಡಿ) ನಿಯಮಗಳು 2009 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 3 ರ ತಿದ್ದುಪಡಿ:-** ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಿದೆ)ರ ನಿಯಮ 3 ರಲ್ಲಿ -

(i) ಖಂಡ (ಸಿಸಿ) ಯಲ್ಲಿ, "ನಿರ್ವಹಿಸಲ್ಪಡುವ ಆಸ್ಪತ್ರೆಗಳು ಅಥವಾ ನಿಯಂತ್ರಣಕ್ಕೊಳಪಡುವ ವೈದ್ಯಕೀಯ ಸಂಸ್ಥೆಗಳು" ಎಂಬ ಪದಗಳ ಬದಲಿಗೆ "ರಾಜ್ಯ ಸರ್ಕಾರದ ಒಡೆತನದಲ್ಲಿ ಅಥವಾ ನಿಯಂತ್ರಣಕ್ಕೊಳಪಡುವ, ನಿರ್ವಹಿಸಲ್ಪಡುವ ವೈದ್ಯಕೀಯ ಸಂಸ್ಥೆಗಳನ್ನು ಒಳಗೊಂಡಂತೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಅಥವಾ ಸಂಘಗಳ ನೋಂದಣಿಯ ವ್ಯವಸ್ಥೆಗಿರುವ ಇತರೆ ಕಾನೂನಿನಲ್ಲಿ ಅಥವಾ ಇಂದ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

(ii) ಖಂಡ (ಇ) ಯನ್ನು (ಇ1) ಎಂದು ಮರುಸಂಖ್ಯೆಗೊಳಿಸತಕ್ಕದ್ದು ಮತ್ತು ಹಾಗೆ ಖಂಡ (ಇ1) ಎಂದು ಮರುಸಂಖ್ಯೆಗೊಳಿಸಿರುವುದಕ್ಕೂ ಮೊದಲು ಈ ಕೆಳಗಿರುವುದನ್ನು ಸೇರ್ಪಡೆ ಮಾಡತಕ್ಕದ್ದು, ಎಂದರೆ -

"(ಇ) "ಪ್ಯಾಕೇಜ್ ದರ"ದ ಅರ್ಥವೆಂದರೆ, ಒಳರೋಗಿಗೆ ತಗಲುವ ಒಟ್ಟುಗೂಡಿದ ವೆಚ್ಚ/ದೈನಂದಿನ ಪಾಲನೆ/ರೋಗ ನಿರ್ಣಯ ಪ್ರಕ್ರಿಯೆಯನ್ನು ಫಲಾನುಭವಿ ಪಡೆದುಕೊಂಡಿದ್ದರೆ ಅಥವಾ ತುರ್ತು ಚಿಕಿತ್ಸೆಗೆ ದಾಖಲಾದ ದಿನದಿಂದ ಬಿಡುಗಡೆಗೊಂಡ ದಿನದವರೆಗೆ (i) ನೋಂದಣಿ ವೆಚ್ಚ (ii) ದಾಖಲಾತಿ ವೆಚ್ಚ (iii) ರೋಗಿಯ ಊಟ ಸೇರಿದಂತೆ ಸ್ಥಳಾವಕಾಶಕ್ಕೆ ತಗಲುವ ವೆಚ್ಚ (iv) ಶಸ್ತ್ರಚಿಕಿತ್ಸೆಯ ವೆಚ್ಚ (v) ಚುಚ್ಚುಮದ್ದಿನ ವೆಚ್ಚ (vi) ಡ್ರೆಸಿಂಗ್ ವೆಚ್ಚ (vii) ವೈದ್ಯರ/ಸಮಾಲೋಚಕರ ಭೇಟಿ ವೆಚ್ಚ (viii) ಐಸಿಯು/ಐಸಿಸಿ ವೆಚ್ಚ (ix) ಸಂಯೋಜನಾ (monitoring) ವೆಚ್ಚ (x) ಟ್ರಾನ್ಸ್‌ಫ್ಯೂಶನ್ ವೆಚ್ಚ (xi) ಅರಿವಳಿಕೆ ವೆಚ್ಚ (xii) ಶಸ್ತ್ರಕ್ರಿಯಾ ಕೊಠಡಿ ವೆಚ್ಚ (xiii) ಪ್ರಕ್ರಿಯೆಯ ವೆಚ್ಚ/ಶಸ್ತ್ರಚಿಕಿತ್ಸಕರ ಶುಲ್ಕ (xiv) ಶಸ್ತ್ರಚಿಕಿತ್ಸೆಯ ಡಿಸ್ಪೋಸಬಲ್ಸ್ ಮತ್ತು ವೈದ್ಯೋಪಚಾರದಲ್ಲಿ ಉಪಯೋಗಿಸುವ ಎಲ್ಲಾ ಪರಿಕರಗಳು (xv) ಔಷಧಿಗಳ ವೆಚ್ಚ (xvi) ಸಂಬಂಧಿಸಿದ ನಿತ್ಯದ ಮತ್ತು ಅಗತ್ಯ ತಪಾಸಣೆಗಳು (xvii) ಫಿಸಿಯೋಥೆರಪಿ ವೆಚ್ಚ ಮುಂತಾದವು (xviii) ಶುಶ್ರೂಷೆ ಪಾಲನೆ ಮತ್ತು ಇದರ ಸೇವಾ ವೆಚ್ಚ ಸೇರಿಕೊಂಡಂತೆ (ಪರಿಮಿತಗೊಳಿಸದಂತೆ).

ಪರಂತು ಸರ್ಕಾರಿ ನೌಕರನು ಒಳರೋಗಿಯಾಗಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ, ಆಸ್ಪತ್ರೆಯು ಸರ್ಕಾರಿ ನೌಕರನನ್ನಾಗಲೀ ಅಥವಾ ಅವರ ಪರಿಚಾರಕನನ್ನು ಔಷಧಿ/ವಿವಿಧ ವಸ್ತುಗಳು/ಉಪಕರಣಗಳು ಅಥವಾ ಜೋಡಣೆಗಳು ಇವುಗಳನ್ನು ಹೊರಗಿನಿಂದ ಖರೀದಿಸಲು ಪ್ರತ್ಯೇಕವಾಗಿ ಕೋರತಕ್ಕದ್ದಲ್ಲ ಮತ್ತು ಎಲ್ಲಾ ಬಾಬ್ತುಗಳ ವೆಚ್ಚವನ್ನು ಸೇರಿದಂತೆ ಇರುವ ಪ್ಯಾಕೇಜ್ ದರದಲ್ಲಿಯೇ ಚಿಕಿತ್ಸೆಯನ್ನು ನೀಡತಕ್ಕದ್ದು. ಒಂದು ವೇಳೆ ವಿಶೇಷ ಸಂದರ್ಭಗಳಲ್ಲಿ ಔಷಧಿ/ವಿವಿಧ ವಸ್ತುಗಳು/ಉಪಕರಣಗಳು ಅಥವಾ ಜೋಡಣೆಗಳು ಅಗತ್ಯವಿದ್ದಲ್ಲಿ ಹೊರಗಿನಿಂದ ಆಸ್ಪತ್ರೆಯ ಪ್ರಾಧಿಕಾರವು ಖರೀದಿಸಬೇಕೆಂದಿದ್ದಲ್ಲಿ ಅಂತಹವುಗಳನ್ನೂ ಸಹ ಮರುಪಾವತಿಗೆ ಪರಿಗಣಿಸತಕ್ಕದ್ದು:

ಮುಂದುವರೆದಂತೆ ಪರಂತು, ಎಲ್ಲಿ ಒಂದು ಅಥವಾ ಹೆಚ್ಚಿನ ಅಮುಖ್ಯ ಪ್ರಮಾಣದ ಚಿಕಿತ್ಸೆಯು ಪ್ರಮುಖ ಚಿಕಿತ್ಸೆ ಪ್ರಕ್ರಿಯೆಯ ಭಾಗವಾಗಿರುತ್ತದೆಯೋ, ಅಲ್ಲಿ ಪ್ರಮುಖ ಪ್ರಕ್ರಿಯೆಗೆ ನಿಗದಿಪಡಿಸಿರುವ ದರವು ಪ್ಯಾಕೇಜ್ ದರವಾಗಿರುತ್ತದೆ ಮತ್ತು ಪ್ಯಾಕೇಜ್ ದರದ ಶೇಕಡ 50 ಮಾತ್ರ ಅಮುಖ್ಯ ಪ್ರಮಾಣದ ಪ್ರಕ್ರಿಯೆದ್ದಾಗಿರುತ್ತದೆ.

(iii) ಖಂಡ 'ಹೆಚ್' ನಲ್ಲಿ -

(ಅ) ಉಪ ಖಂಡ (iv) ಕ್ಕೆ, ಈ ಕೆಳಕಂಡವುಗಳನ್ನು ಪ್ರತಿಸ್ಥಾಪಿಸತಕ್ಕದ್ದು:-

"(iv) ನವಜಾತ ಶಿಶುವಿನ ಚಿಕಿತ್ಸಾ ವೆಚ್ಚಗಳನ್ನು ತಾಯಿಯ ಹೆರಿಗೆಯ ವೆಚ್ಚದೊಂದಿಗೆ ಪ್ರತ್ಯೇಕವಾಗಿ ಮರುಪಾವತಿಸುವುದು;

(ivಎ) ಪ್ಯಾಕೇಜ್ ದರದ ಆಧಾರದ ಮೇಲೆ ಚಿಕಿತ್ಸೆ;"

(ಆ) ಉಪ ಖಂಡ (v) ರಲ್ಲಿನ ಕೋಷ್ಟಕಕ್ಕೆ ಕೆಳಕಂಡವುಗಳನ್ನು ಪ್ರತಿಸ್ಥಾಪಿಸತಕ್ಕದ್ದು:-

**ಕೋಷ್ಟಕ**

| | 2007 ರ ವೇತನ ಶ್ರೇಣಿಗಳ ಪ್ರಕಾರ ಮೂಲ ವೇತನ | ಆಸ್ಪತ್ರೆಗಳಲ್ಲಿ ಅಥವಾ ಸ್ಯಾನಿಟೋರಿಯಗಳಲ್ಲಿನ ವಸತಿಯ ದರ್ಜೆ (ದಿನದ ಆಧಾರದ ಮೇಲೆ ಅನ್ವಯವಾಗುವ ದರಗಳು) |
|---|---|---|
| | 1 | 2 |
| | 1. ಎಲ್ಲಾ ಸರ್ಕಾರಿ/ವಿಶೇಷ ಆಸ್ಪತ್ರೆಗಳು ಸ್ಯಾನಿಟೋರಿಗಳನ್ನು ಒಳಗೊಂಡಂತೆ. | |
| (1) | ರೂ.6500 ನ್ನು ಮೀರದಂತೆ | ವಾಣಿವಿಲಾಸ ಆಸ್ಪತ್ರೆ, ಬೆಂಗಳೂರು, ಮಿಂಟೋ ಆಸ್ಪತ್ರೆ, ಬೆಂಗಳೂರು, ಚೆಲುವಾಂಬ ಆಸ್ಪತ್ರೆ, ಮೈಸೂರು, ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ ಈ ಆಸ್ಪತ್ರೆಗಳಲ್ಲಿ ಸಾಮಾನ್ಯ ದರ್ಜೆಯ ವಾರ್ಡ್‌ಗಳು ಅಥವಾ ರೂ.30 ರ ವಾರ್ಡ್‌ಗಳು ಅಥವಾ ರೂ.50 ರ ವಾರ್ಡ್‌ಗಳು. |

| | | |
|---|---|---|
| (2) | ರೂ.6500 ಕ್ಕೆ ಹೆಚ್ಚಿನ ಆದರೆ ರೂ.9500 ನ್ನು ಮೀರದಂತೆ | ರೂ.30 ರ ಅಥವಾ ಮೇಲ್ಪಟ್ಟ ಯಾವುದೇ ವಾರ್ಡ್‌ಗಳು ಮತ್ತು ರೂ.50 ರ ಒಳಪಟ್ಟ ವಾರ್ಡ್‌ಗಳು. |
| (3) | ರೂ.9500 ಕ್ಕೆ ಹೆಚ್ಚಿನ ಆದರೆ ರೂ.14400 ನ್ನು ಮೀರದಂತೆ | ರೂ.50 ರ ಅಥವಾ ಮೇಲ್ಪಟ್ಟ ಯಾವುದೇ ವಾರ್ಡ್‌ಗಳು ಮತ್ತು ರೂ.75 ರ ಒಳಪಟ್ಟ ವಾರ್ಡ್‌ಗಳು. |
| (4) | ರೂ.14400ಕ್ಕೆ ಹೆಚ್ಚಿನ ಆದರೆ ರೂ.16800 ನ್ನು ಮೀರದಂತೆ | ರೂ.100 ರ ಅಥವಾ ಮೇಲ್ಪಟ್ಟ ಯಾವುದೇ ವಾರ್ಡ್‌ಗಳು ಮತ್ತು ರೂ.150 ರ ಒಳಪಟ್ಟ ವಾರ್ಡ್‌ಗಳು. |
| (5) | ರೂ.16800 ಕ್ಕೆ ಮೇಲ್ಪಟ್ಟು | Rs.150 ರ ವಾರ್ಡ್‌ಗಳು ಅಥವಾ ರೂ.150 ರ ಮೇಲ್ಪಟ್ಟ ಯಾವುದಾದರೂ ವಾರ್ಡ್‌ಗಳು. |

3. **ನಿಯಮ 4 ರ ತಿದ್ದುಪಡಿ:-** ಈ ನಿಯಮಾವಳಿಯ ನಿಯಮ 4 ರಲ್ಲಿನ ಉಪ ನಿಯಮ (4) ನ್ನು ಕೈಬಿಡತಕ್ಕದ್ದು.

4. **ನಿಯಮ 8 ರ ತಿದ್ದುಪಡಿ:-** ಈ ನಿಯಮಾವಳಿಯ ನಿಯಮ 8 ರ ಉಪ ನಿಯಮ (3) ರ ಪರಂತುಕದಲ್ಲಿನ ಕೋಷ್ಟಕಕ್ಕೆ ಕೆಳಕಂಡವುಗಳನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"ಕೋಷ್ಟಕ

| | ವೇತನ ಶ್ರೇಣಿ | ವಾರ್ಡ್‌ಗಳ ವರ್ಗ/ಯಾವ ವರ್ಗದ ವಾರ್ಡ್‌ಗೆ ಅರ್ಹತೆ ಇರುವುದು | ಅರ್ಹತೆ ಇರುವ ವಾರ್ಡ್‌ನ ಗರಿಷ್ಠ ದರ /ರೂಂ ಬಾಡಿಗೆ |
|---|---|---|---|
| | 1 | 2 | 3 |
| i) | ಮಾಹೆಯಾನ ರೂ.8000/- ರವರೆಗೆ | ಸಾಮಾನ್ಯ ವಾರ್ಡ್ | ದಿನ ಒಂದಕ್ಕೆ ರೂ.200/- |
| ii) | ಮಾಹೆಯಾನ ರೂ.8001/- ರಿಂದ ರೂ.21600/- ರವರೆಗೆ | ಅರೆ ಖಾಸಗಿ ವಾರ್ಡ್ | ದಿನ ಒಂದಕ್ಕೆ ರೂ.750/- |
| iii) | ಮಾಹೆಯಾನ ರೂ.21600/- ಮತ್ತು ಹೆಚ್ಚಿನ | ಖಾಸಗಿ ವಾರ್ಡ್ | ದಿನ ಒಂದಕ್ಕೆ ರೂ.1000/- |

**ಟಿಪ್ಪಣಿ:-** ಅರ್ಹತೆಗೆ ಇರುವ ವಸತಿಯ ಬದಲು ಮೇಲ್ದರ್ಜೆ ವಸತಿಯಲ್ಲಿ ಚಿಕಿತ್ಸೆ ಪಡೆಯುವುದಕ್ಕೆ ಅವಕಾಶವಿರುವುದಿಲ್ಲ. ಒಂದು ವೇಳೆ ತುರ್ತು ಪರಿಸ್ಥಿತಿಯಲ್ಲಿ ಅರ್ಹತೆಗೆ ಇರುವ ವಸತಿ ಲಭ್ಯವಾಗದಿದ್ದಲ್ಲಿ, ಅಂತಹ ವಸತಿ ಲಭ್ಯವಾಗುವವರೆಗೆ ಕೂಡಲೇ ಮೇಲ್ದರ್ಜೆಯ ವಸತಿಯಲ್ಲಿ ಚಿಕಿತ್ಸೆ ಪಡೆಯಲು ಅವಕಾಶ ಮಾಡಿಕೊಡಬಹುದು. ನಿಗದಿತ ಆಸ್ಪತ್ರೆಯಲ್ಲಿ ಫಲಾನುಭವಿಗೆ ಅರ್ಹತೆಯುಳ್ಳ ವಸತಿ ಲಭ್ಯವಾಗದಿದ್ದಲ್ಲಿ ಮೇಲ್ದರ್ಜೆಯ ವಸತಿಯಲ್ಲಿ ಚಿಕಿತ್ಸೆ ನೀಡಿದ್ದಾಗ್ಯೂ ಫಲಾನುಭವಿಗೆ ಅರ್ಹವುಳ್ಳ ದರಕ್ಕೆ ಮಾತ್ರ ಬಿಲ್ ಮಾಡತಕ್ಕದ್ದಾಗಿರುತ್ತದೆ.

ಒಂದು ವೇಳೆ, ಸರ್ಕಾರಿ ನೌಕರರ ಕೋರಿಕೆಯ ಮೇರೆಗೆ, ಮೇಲ್ದರ್ಜೆ ವಾರ್ಡ್‌ನಲ್ಲಿ ಚಿಕಿತ್ಸೆಯನ್ನು ನೀಡಿದ್ದಲ್ಲಿ, ಅವರು ಅರ್ಹವಿರುವುದಕ್ಕೆ ಮೀರಿದ ಮತ್ತು ಹೆಚ್ಚಿನ ವೆಚ್ಚವನ್ನು ಸಂಬಂಧಿಸಿದ ಸರ್ಕಾರಿ ನೌಕರರೇ ಭರಿಸತಕ್ಕದ್ದು.

5. **ನಿಯಮ 14 ರ ತಿದ್ದುಪಡಿ:-** ಈ ನಿಯಮಾವಳಿಯ ನಿಯಮ 14 ರಲ್ಲಿ,-

(i) ಉಪ ನಿಯಮ (2) ರಲ್ಲಿ,-

(ಅ) ಖಂಡ (ಜೆ) ನಲ್ಲಿ, 'ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು 1999 ರ ಅನುಸಾರವಾಗಿ ರೂ. 8,200' ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ 'ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು 2007 ರ ಅನುಸಾರ ರೂ.15,600' ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು;

(ಬ) ಖಂಡ (ಎಂ) ನಲ್ಲಿ, 'ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು 1999 ರ ಅನುಸಾರವಾಗಿ ರೂ. 8,200' ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ 'ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು 2007 ರ ಅನುಸಾರ ರೂ.15,600' ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು;

(ii) ಉಪ ನಿಯಮ (3) ಕ್ಕೆ, ಕೆಳಕಂಡವುಗಳನ್ನು ಪ್ರತಿಸ್ಥಾಪಿಸತಕ್ಕದ್ದು:-

"(3) ಪ್ಯಾಕೇಜ್ ದರ/ದರಗಳಂತೆ ಅನುಸೂಚಿ-I ರಲ್ಲಿ ಹೇಳಲಾದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ಪಡೆದ ರೋಗ ನಿರ್ಣಯ ವಿಧಾನ ಮತ್ತು ಚಿಕಿತ್ಸೆಗಳ ವೈದ್ಯಕೀಯ ವೆಚ್ಚದ ಮರುಪಾವತಿಯು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳಡಿಯಲ್ಲಿ (CGHS) ಕಾಲಕಾಲಕ್ಕೆ ವಿವಿಧ ರೋಗ ನಿರ್ಣಯ ವಿಧಾನಗಳಿಗೆ ಮತ್ತು ಚಿಕಿತ್ಸೆಗಳಿಗೆ ನಿಗದಿಪಡಿಸಿರುವಂತಿರತಕ್ಕದ್ದು.

ಪರಂತು, ಬೆಂಗಳೂರಿಗೆ ನಿಗದಿಪಡಿಸಲಾದ ಪ್ಯಾಕೇಜ್ ದರಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಗಳಿಗೆ ಅನ್ವಯವಾಗುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯನ್ನು ಹೊರತುಪಡಿಸಿ ನಗರ/ಪುರ ಸಭಾ ವ್ಯಾಪ್ತಿಗೆ ಶೇಕಡ 10 ರಷ್ಟು ಕಡಿತಗೊಳಿಸಿದ ದರವು ಅನ್ವಯವಾಗುತ್ತದೆ ಮತ್ತು ಪುರ ಸಭಾ ವ್ಯಾಪ್ತಿಯನ್ನು ಬಿಟ್ಟು ಇತರ ಸ್ಥಳಗಳಲ್ಲಿ ಶೇಕಡ 20 ಕಡಿತಗೊಳಿಸಿದ ದರಗಳು ಅನ್ವಯವಾಗುತ್ತದೆ.

ಮುಂದುವರೆದಂತೆ, ಪರಂತು, ವಿಶೇಷ ಸಜ್ಜುಗೊಂಡ (ಸೂಪರ್ ಸ್ಪೆಷಾಲಿಟಿ) ಚಿಕಿತ್ಸೆ ಲಭ್ಯವಿರುವ ಎಲ್ಲಾ ಸ್ಥಳಗಳಲ್ಲಿ ಅಂತಹ ಚಿಕಿತ್ಸೆಯನ್ನು ಪಡೆದಿರುವುದಕ್ಕೆ ಯಾವುದೇ ಕಡಿತವಿರತಕ್ಕದ್ದಲ್ಲ.

**ಟಿಪ್ಪಣಿ:-** ಮೇಲಿನ ಪರಂತುಕದಲ್ಲಿ ಸೂಚಿಸಲಾದ ದರಗಳು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳಲ್ಲಿ ಅರೆ ಖಾಸಗಿ (Semi private) ವರ್ಗದ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯಲು ಅನ್ವಯವಾಗುತ್ತದೆ. ಮಾನ್ಯತೆ ಪಡೆದ ಆಸ್ಪತ್ರೆಗಳ ಖಾಸಗಿ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆದಲ್ಲಿ ಶೇಕಡ 15 ರಷ್ಟು ಪ್ಯಾಕೇಜ್ ದರಗಳಲ್ಲಿ ಹೆಚ್ಚಳವಿರುತ್ತದೆ ಮತ್ತು ಸಾಮಾನ್ಯ ವರ್ಗದ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆದಲ್ಲಿ ಪ್ಯಾಕೇಜ್ ದರಗಳಲ್ಲಿ ಶೇಕಡ 10 ರಷ್ಟು ಕಡಿಮೆ ಇರುತ್ತದೆ. ಇತರ ಎಲ್ಲಾ ರೋಗ ನಿರ್ಣಯ ವಿಧಾನಗಳು ಮತ್ತು ಚಿಕಿತ್ಸೆಗಳ ದರಗಳು ಎಲ್ಲಾ ವರ್ಗದವರಿಗೆ ಒಂದೇ ಆಗಿರತಕ್ಕದ್ದು".

**6. ನಿಯಮ 23 ರ ತಿದ್ದುಪಡಿ:-** ಈ ನಿಯಮಾವಳಿಯ ನಿಯಮ 23 ರ ಉಪ ನಿಯಮ (2) ರಲ್ಲಿ, 'ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು 1999 ರ ಅನುಸಾರವಾಗಿ ರೂ. 8,200' ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ 'ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು 2007 ರ ಅನುಸಾರ ರೂ.15,600' ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು;

7. **ಅನುಸೂಚಿಗಳ ಲೋಪಗೊಳಿಸುವಿಕೆ:-** ಈ ನಿಯಮಗಳ ಅನುಸೂಚಿ ಖಖ ಮತ್ತು ಖಖಖ ನ್ನು ಕೈಬಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಮಾರ್ಕಂಡೇಯ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

**ವಿ.ಸೂ :** ಈ ಅಧಿಸೂಚನೆಯು ಅಧಿಸೂಚನೆ ಸಂಖ್ಯೆ: ಡಿಪಿಎಆರ್ 2 ಎಸ್‌ಎಂಆರ್ 2008 ದಿನಾಂಕ 24-10-2009 ರ ಕನ್ನಡಾನುವಾದ.

**Personnel & Administrative Reforms Secretariat**

**NOTIFICATION**

**No. DPAR 2 SMR 2008, Bangalore, Dated: 24th October, 2009**

Whereas the draft of the following rules further to amend the Karnataka Government Servants' (Medical Attendance) Rules, 1963 was published as required by sub-section (2) of Section 3 of the Karnataka State Civil Services Act, 1978 (Karnataka Act 14 of 1990) in Notification No. DPAR 2 SMR 2008 dated 24-9-2009 in Part IV-A, No.904, of the Karnataka Extraordinary Gazette dated 25-9-2009 inviting objections/suggestions from the persons likely to be affected thereby within 15 days from the date of its publication in the official Gazette.

And whereas the said Gazette was made available to the public on 25-9-2009.

And, whereas no objections / suggestions have been received by the State Government on the said draft.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules, namely :-

**RULES**

1. **Title and commencement**:- (1) These rules may be called the Karnataka Government Servants' (Medical Attendance) (Amendment) Rules, 2009.

(2) They shall come into force from the date of their publication in the official Gazette.

2. **Amendment of Rule 3**:- In the Karnataka Government Servants' (Medical Attendance) Rules, 1963 (hereinafter referred to as the said rules), in rule 3,-

(i) in clause (cc), for the words "medical institutions or hospitals maintained by or under the control of", the words "medical institutions or hospitals owned or controlled, maintained by the State Government including hospitals registered as a Government Society under the Karnataka State Societies Registration Act, 1960 (Karnataka Act 17 of 1960) other law governing the societies registration; or by" shall be substituted;

(ii) clause (e) shall be renumbered as (e1) thereof and before (e1) as so renumbered, the following shall be inserted, namely:-

"**(e)** "Package rate" shall mean and include lump sum cost of in-patient treatment/day care/diagnostic procedure for which a beneficiary has availed or for treatment under emergency from the time of admission to the time of discharge, including (but not limited to)- (i) Registration charges, (ii) Admission charges, (iii) Accommodation charges including patient's diet, (iv) Operation charges, (v) Injection charges, (vi) Dressing charges, (vii) Doctor/consultant visit charges, (viii) ICU/ICCU charges, (ix) Monitoring charges, (x) Transfusion charges, (xi) Anesthesia charges, (xii) Operation theatre charges, (xiii) Procedural charges/surgeon's fee, (xiv) Cost of surgical disposables and all sundries used during hospitalization (xv) Cost of medicines, (xvi) Related routine and essential investigations, (xvii) Physiotherapy charges etc. (xviii) Nursing care and charges for its services:

Provided that during inpatient treatment of the Government servant, the hospital shall not ordinarily ask the Government servant or his attendant to purchase separately the medicines/sundries/equipment or accessories from outside and should provide the treatment within the package rate which includes the cost of all the items. In case of special circumstances, if the medicines, sundries, equipment or accessory is required by the hospital authority to purchase separately from outside, shall also be considered for reimbursement:

Provided further that where one or more minor procedures form part of major treatment procedure, then the package rate would be the rate admissible for major procedure and only 50% of the package rate for minor procedure."

(iii) in clause (h),-

(a) for sub-clause (iv), the following shall be substituted, namely:-

"**(iv)**treatment charges for new born baby are separately reimbursible in addition to delivery charges of mother. "

**(iv-a)** treatment on package rate basis;"

(b) in sub-clause (v), for Table, the following shall be substituted, namely:-

**"TABLE**

| | **Basic Pay as per the 2007 scales of pay** | **Class of accommodation in hospitals or Sanatoria (Rates applicable on per day basis)** |
|---|---|---|
| | **1** | **2** |
| | **1. All Government/Special Hospitals including Sanatoria.** | |
| (1) | Not exceeding Rs.6500 | General Wards or Rs.30 wards or Rs.50 wards in the case of Vanivilas Hospital, Bangalore, Minto Hospital, Bangalore, Cheluvamba Hospital, Mysore, Vijayanagar Institute of Medical Sciences, Bellary. |
| (2) | Exceeding Rs.6500 but not exceeding Rs.9500 | Rs.30 wards or any wards upto and inclusive of Rs.50 wards. |

| | Basic Pay as per the 2007 scales of pay | Class of accommodation in hospitals or Sanatoria (Rates applicable on per day basis) |
|---|---|---|
| | 1 | 2 |
| (3) | Exceeding Rs.9500 but not exceeding Rs.14400 | Above Rs.50 wards or any wards upto and inclusive of Rs.75 wards. |
| (4) | Exceeding Rs.14400 but not exceeding Rs.16800 | Rs.100 wards or any wards just below Rs.150. |
| (5) | Exceeding Rs.16800 | Rs.150 wards or any wards above Rs.150. |

"

**3. Amendment of Rule 4**:- In rule 4 of the said rules, sub-rule (4) shall be omitted.

**4. Amendment of Rule 8**:- In rule 8 of the said rules, in sub-rule (3), in the proviso, for the Table, the following shall be substituted, namely:-

**"TABLE**

| | Range of pay | Category of Ward/class of accommodations to which entitled | Maximum ward charges/room rent to which entitled |
|---|---|---|---|
| | 1 | 2 | 3 |
| i) | Upto Rs.8000 per month | General Ward | Rs.200/- per day |
| ii) | Rs.8001 to Rs.21600 per month | Semi Private Ward | Rs.750/- per day |
| iii) | Rs.21600 and above | Private Ward | Rs.1000/- per day |

"

**Note:** The treatment in higher category of accommodation than the entitled category is not permissible. However, in case of an emergency when the entitled category accommodation is not available, admission in the immediate higher category may be allowed till the entitled category accommodation becomes available. If a particular hospital does not have the ward as per entitlement of beneficiary, then the hospital can only bill as per entitlement of the beneficiary even though the treatment was given in a higher type of ward.

If, on the request of the Government servant, treatment is provided in a higher category of ward, then the expenditure over and above entitlement shall be borne by the Government servant concerned."

**5. Amendment of Rule 14** :- In rule 14 of the said rules,-

(i) in sub-rule (2).-

(a) in clause (j), for the words and figures "Rs.8,200/- in accordance with the Karnataka Civil Services (Revised Pay) Rules 1999", the words and figures "Rs.15,600/- in accordance with the Karnataka Civil Services (Revised Pay) Rules, 2007" shall be substituted;

(b) in clause (m), for the words and figures "Rs.8,200/- if it is in accordance with the Karnataka Civil Services (Revised Pay) Rules 1999", the words and figures "Rs.15,600/- in accordance with the Karnataka Civil Services (Revised Pay) Rules, 2007" shall be substituted; and

(ii) in sub-rule (3), the following shall be substituted, namely:-

"(3) The reimbursement of the medical expenses in respect of the diagnostic procedures and treatment taken in the authorized hospitals and medical institutions specified in Schedule-I shall be at the same rates fixed for package rates/rates for the different diagnostic procedures and treatment as may be fixed by the Ministry of Health and Family Welfare, Government of India under the Central Government Health Service (CGHS), from time to time.

Provided that the package rates as fixed for Bangalore are applicable to the treatment taken in the hospitals located in the Bruhat Bangalore Mahanagara Palike areas. In case of the City Corporation areas other than the Bruhat Mahanagara Palike areas, these rates apply with a reduction by ten percent and to the areas other than the City Corporation with a reduction by twenty percent:

Provided further that no reduction shall be made for super speciality treatments at all places where such facilities are available.

**Note:**- The rates applicable to the Bruhat Bangalore Mahanagara Palike areas as indicated in the above proviso are for the semi private ward category. There shall be fifteen percent increase in package rates for treatment in private wards and ten percent decrease in package rates for treatment in general wards. Rates for all other diagnostic procedures and treatment shall be the same for all categories."

**6. Amendment of Rule 23** :- In rule 23 of the said rules, in sub-rule (2), for the words and figures "Rs.8,200/- in accordance with the Karnataka Civil Services (Revised Pay) Rules 1999", the words and figures "Rs.15,600/- in accordance with the Karnataka Civil Services (Revised Pay) Rules, 2007" shall be substituted.

**7. Omission of Schedules:**- Schedule II and Schedule III of the said rules shall be omitted.

By Order and in the name of the Governor of Karnataka,

**P. MARKANDEYA**
Under Secretary to Government,
Department of Personnel and Administrative Reforms
(Service Rules-2)

# ವಿಶೇಷ ಪತ್ರಿಕೆ

| ಭಾಗ - III | ಬೆಂಗಳೂರು, ಗುರುವಾರ, ಅಕ್ಟೋಬರ್ ೨೨, ೨೦೦೯ (ಆಶ್ವಯುಜ ೩೦, ಶಕ ವರ್ಷ ೧೯೩೧) | ನಂ. ೯೬೦ |
|---|---|---|

## ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

### ಅಧಿಸೂಚನೆ – 1

**ಸಂಖ್ಯೆ : ಸಿಐ 410 ಎಸ್‌ಪಿಕ್ಯೂ 2009, ಬೆಂಗಳೂರು, ದಿನಾಂಕ, 22ನೇ ಅಕ್ಟೋಬರ್, 2009**

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ (1966ರ ಕರ್ನಾಟಕ ಕಾಯ್ದೆ ಸಂಖ್ಯೆ 18) ಕಲಂ 3(1) ರಲ್ಲಿ ದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರವು ಈ ಕೆಳಗಿನ ಷೆಡ್ಯೂಲ್‌ನ ಕಾಲಂ 2ರಲ್ಲಿ ನಮೂದಿಸಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಕನ್ನಮಂಗಲ ಗ್ರಾಮದಲ್ಲಿನ ಸರ್ವೆ ನಂಬರುಗಳಿಗೆ ಹೊಂದಿಕೊಂಡಂತೆ ಕಾಲಂ 3ರಲ್ಲಿ ನಮೂದಿಸಿರುವ ವಿಸ್ತೀರ್ಣ ಹಾಗೂ ಕಾಲಂ 6 ರಿಂದ 9ರಲ್ಲಿ ತೋರಿಸಿರುವ ಚಕ್ಕುಬಂದಿಯುಳ್ಳ ಜಮೀನುಗಳನ್ನು ಕೈಗಾರಿಕಾ ಪ್ರದೇಶವೆಂದು ಈ ಮೂಲಕ ಘೋಷಿಸಲಾಗಿದೆ.

ಗ್ರಾಮ : ಕನ್ನಮಂಗಲ ಹೋಬಳಿ : ಕಸಬಾ ತಾಲೂಕು : ದೇವನಹಳ್ಳಿ ಜಿಲ್ಲೆ : ಬೆಂಗಳೂರು ಗ್ರಾಮಾಂತರ ಜಿಲ್ಲೆ

| ಕ್ರ ಸಂ | ಸರ್ವೆ ನಂ. | ವಿಸ್ತೀರ್ಣ | | | ಚಕ್ಕುಬಂದಿ | | | |
|---|---|---|---|---|---|---|---|---|
| | | ಐನ್ ಎ–ಗು | ಖರಾಬು ಎ–ಗು | ಬಾಕಿ ಎ–ಗು | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
| 1 | 2 | 3 | 4 | 5 | 6 | 7 | 8 | 9 |
| 1. | 73ಪಿ2 | 4–00 | – | 4–00 | 133 | 152 | 73ರ ಪೈಕಿ | 73ಪಿ5 |
| 2. | 73ಪಿ5 (166) | 1–02 | – | 1–02 | 73ರ ಪೈಕಿ | 90 | 73ರ ಪೈಕಿ | 73ರ ಪೈಕಿ |
| 3. | 79 | 0–25 | – | 0–25 | 79ರ ಉಳಿಕೆ | 83 | 83 | 77, 78 |